2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ145/2019

| | | |
|---|---|---|
| ಸಾಕ್ಷಿದಾರರ ಹೆಸರು | - ಸುಕುಮಾರ್ ಎಸ್ | ಪಿಡಬ್ಲ್ಯೂ - 17 |
| ತಂದೆಯ ಹೆಸರು | - ಶಿವಯ್ಯ | ಸಿಡಬ್ಲ್ಯೂ-36 |
| ವಯಸ್ಸು | - 56 ವರ್ಷ | |
| ಉದ್ಯೋಗ | - ಎ ಎಸ್ ಐ , ತರೀಕೆರೆ ಪೊಲೀಸ್ ಠಾಣೆ | |
| ವಾಸ ಸ್ಥಳ | - ತರೀಕೆರೆ | |

ದಿನಾಂಕಃ 17.02.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1. ನಾನು 2011 ನೇ ಇಸವಿಯಿಂದ 2020 ಇಸವಿಯವರೆಗೆ ಚಿಕ್ಕಮಗಳೂರು ಗ್ರಾಮಾಂತರ ಸಿ ಪಿ ಐ ಕಚೇರಿಯಲ್ಲಿ ಎ ಎಸ್ ಐ ಆಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿನಾಂಕಃ 04.08.2019 ರಂದು ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಆರೋಪಿ ಹೇಳಿದಂತೆ ಬೆರಳಚ್ಚು ಮಾಡಿಕೊಟ್ಟಿರುತ್ತೇನೆ.ಈ ಪ್ರಕರಣದ ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಇಲಾಖಾ ಕ್ಯಾಮೆರಾದಲ್ಲಿ ತೆಗೆಯಲಾಗಿದ್ದ ಫೋಟೋಗಳನ್ನು ಗ್ರಾಮಾಂತರ ವೃತ್ತ ನಿರೀಕ್ಷಕರ ಕಚೇರಿಯಲ್ಲಿದ್ದ ಕಂಪ್ಯೂಟರ್ ಗೆ ಕ್ಯಾಮೆರಾದಲ್ಲಿದ್ದ ಮೆಮೋರಿ ಕಾರ್ಡ್ ಮುಖಾಂತರ ಯಥಾ ಸ್ಥಿತಿಯಲ್ಲಿ ವರ್ಗಾಯಿಸಿ ನಂತರ ಅವುಗಳನ್ನು ಪುನಃ ಯಥಾ ಸ್ಥಿತಿಯಲ್ಲಿ ಒಂದು ಖಾಲಿ ಸಿಡಿಗೆ ವರ್ಗಾಯಿಸಿರುತ್ತೇನೆ. ಡಿಜಿಟಲ್ ಕ್ಯಾಮೆರಾದಿಂದ ಫೋಟೋ

ತೆಗೆಯಲು ಮತ್ತು ಅವುಗಳನ್ನು ಕಂಪ್ಯೂಟರ್ ಗೆ ವರ್ಗಾಯಿಸಿ ನಂತರ ಸಿಡಿಗೆ ವರ್ಗಾಯಿಸುವ ಬಗ್ಗೆ 1996 ನೇ ಇಸವಿಯಲ್ಲಿ ಮತ್ತು ನಂತರದ ವರ್ಷಗಳಲ್ಲಿ ನನಗೆ ಇಲಾಖಾ ವತಿಯಿಂದ ತರಬೇತಿಯನ್ನು ನೀಡಲಾಗಿರುತ್ತದೆ. ನಂತರ ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ.46 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.46(ಎ) ಎಂದು ಗುರುತಿಸಲಾಯಿತು. ನಾನು ಫೋಟೋಗಳನ್ನು ವರ್ಗಾಯಿಸಿದ ಸಿಡಿಯನ್ನು ನೋಡುತ್ತಿದ್ದು ಅದನ್ನು ನಿಪಿ.47 ಎಂದು ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ನಿಪಿ.2 ರಿಂದ ನಿಪಿ.6, ನಿಪಿ.11, ನಿಪಿ.24,ನಿಪಿ.29, ನಿಪಿ.30 ಫೋಟೋಗಳನ್ನು ನೋಡಿ ತನಿಖಾಧಿಕಾರಿಗಳ ಆದೇಶದ ಮೇರೆಗೆ ತಾನು ಸಿಡಿಗೆ ವರ್ಗಾಯಿಸಿದ ಫೋಟೋಗಳು ಅವೇ ಎಂದು ನುಡಿದಿರುತ್ತಾರೆ.

ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದಃ ಆರೋಪಿ ಪರವಾಗಿ

3. ದಿನಾಂಕಃ 04.08.2019 ರಂದು ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಆರೋಪಿ ಹೇಳಿದಂತೆ ಬೆರಳಚ್ಚು ಮಾಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಡಿಜಿಟಲ್ ಕ್ಯಾಮೆರಾದಲ್ಲಿ ಫೋಟೋಗಳನ್ನು ತೆಗೆದರೆ ಅವುಗಳನ್ನು ತೆಗೆದ ದಿನಾಂಕ ಮತ್ತು ಸಮಯ ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು

ನುಡಿದು ನಂತರ ನಾವು ಅದನ್ನು ಅಡ್ಜೆಸ್ಟ್ ಮಾಡಿಕೊಂಡರೆ ಬರುತ್ತದೆ ಇಲ್ಲದಿದ್ದರೆ ಬರುವುದಿಲ್ಲ ಎನ್ನುತ್ತಾರೆ. ಆ ರೀತಿ ದಿನಾಂಕ ಮತ್ತು ಸಮಯ ಬರುವಂತೆ ಅಡ್ಜೆಸ್ಟ್ ಮಾಡದಿರುವಂತೆ ನಿಮಗೆ ಮೇಲಾಧಿಕಾರಿಗಳಿಂದ ಯಾವುದೇ ಸೂಚನೆ ಬಂದಿಲ್ಲ ಎಂದರೆ ಸರಿ.

4. ನಿಪಿ.2 ರಿಂದ ನಿಪಿ.6, ನಿಪಿ.11, ನಿಪಿ.24, ನಿಪಿ.29, ನಿಪಿ.30 ಫೋಟೋಗಳಲ್ಲಿ ಅವುಗಳನ್ನು ತೆಗೆದ ದಿನಾಂಕ ಮತ್ತು ಸಮಯ ಕಂಡು ಬರುವುದಿಲ್ಲ ಎಂದರೆ ಸರಿ. ಫೋಟೋಗಳನ್ನು ಸಿಡಿಗೆ ವರ್ಗಾಯಿಸುವ ಬಗ್ಗೆ ಮತ್ತು ನಿಪಿ.46 ರಂತೆ ದೃಢೀಕರಣ ಪತ್ರವನ್ನು ನೀಡಲು ನಿಮಗೆ ಯಾವುದೇ ತರಬೇತಿ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ